ಎಚ್.ಆರ್. ದೇಸಾಯಿ, ರಾಯಚೂರು

*ಮುಪ್ಪಿನಲ್ಲಿ ಪಕ್ಕ ಹೆಂಡತಿ ಇರಬೇಕೋ ಅಥವಾ ಆತ್ಮೀಯ ಗೆಳೆಯ ಇರಬೇಕೋ?*



ಪತ್ನಿಗೆ ಆರೋಗ್ಯವಿದ್ದರೆ ಪತ್ನಿ, ಇಲ್ಲದಿದ್ದರೆ ದೃಢಕಾಯ ಇರುವ ನರ್ಸ್.

ಎಂ.ಎಸ್. ಗುರುರಾಜಾಚಾರ್, ಬಳ್ಳಾರಿ

*ಸಮುದ್ರದಲ್ಲಿ ಈಜುವವನಿಗೂ, ಸಂಸಾರದಲ್ಲಿ ಈಜುವವನಿಗೂ ಏನು ವ್ಯತ್ಯಾಸ?*

ಸಮುದ್ರದಲ್ಲಿ ಈಜುವವನ ಸುತ್ತಲಿನ ಮೊಸಳೆ, ಏಡಿ, ತಿಮಿಂಗಿಲಗಳು ಅದೇ ರೂಪಗಳಲ್ಲೇ ಇರುತ್ತವೆ; ಇಲ್ಲಿ ಮನುಷ್ಯರೂಪದಲ್ಲಿರುತ್ತವೆ!

ಎಂ.ಎನ್. ಸೋಮಶೇಖರ್, ಮೈಸೂರು

*ಇಲ್ಲೊಬ್ಬ ಪತ್ನಿ ತನ್ನ ಪತಿಯನ್ನು ಕೊಂದಳಲ್ಲಾ, ಏಕೆ?*

ದಿನವೂ ಅವಳ ಕೈಲಿ ಸಿಲುಕಿ ಆತ ನರಳುವುದನ್ನು ನೋಡಲಾಗದೆ ದಯಾಮರಣ ಕರುಣಿಸಿದಳಂತೆ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಕೆಲವು ಚಿತ್ರನಿರ್ದೇಶಕರಿಗೆ ಸೊಂಟದ ಮೇಲೇ ವ್ಯಾಮೋಹ ಜಾಸ್ತಿ. ಯಾಕೆ?*



ಸೊಂಟದ ಕೆಳಗಿನ ಮಾತುಗಳನ್ನೇ ಬಳಸುವ ನಿರ್ದೇಶಕರಿಗಿಂತ ಇವರೇ ವಾಸಿ ಬಿಡಿ.

ರವಿ ಎಂ. ಪೈ, ಕಾಸರಕೋಡ

*ಹಿಂದುಗಳಿಗೇಕೆ ವರ್ಷಕ್ಕೆ ಹದಿನೆಂಟು ಹಬ್ಬಗಳು?*

ಬಾಂಧವ್ಯ ಹಬ್ಬಬೇಕು ಎಂದರೆ ಇಷ್ಟಾದರೂ ಹಬ್ಬ ಬೇಕು!

ಜಾಕೋಬ್ ಡಿಸೋಜ, ಕುರುವಳ್ಳಿ

*ಜೀವನಕ್ಕೆ ಹೆದರಿ ಆತ್ಮಹತ್ಯೆಗೆ ಪ್ರಯತ್ನಿಸುವವರಿಗೆ ನಿಮ್ಮ ಆಶ್ವಾಸನೆ ಏನು?*

ಕಷ್ಟವೆಂಬುದು ಕೋತಿಯಂತೆ; ಅಂಜಿದರೆ ಹೋ ಎನ್ನುತ್ತದೆ, ಎದುರಿಸಿದರೆ ಮಂಗಮಾಯ.

ಎಂ. ಹಮೀದ್, ವಿಟ್ಲ

*ಒಂದನ್ನೂ ಕಳೆದುಕೊಳ್ಳದೆ ಮತ್ತೊಂದನ್ನು ಗಳಿಸುವುದಕ್ಕೆ ಆಗುವುದಿಲ್ಲವೆ ಸಾರ್?*

ಊಹೂಂ. ಏನೇ, ಎಷ್ಟೇ ಗಳಿಸಿದರೂ ಪ್ರತಿ ಕ್ಷಣ ಆಯಸ್ಸನ್ನಂತೂ ಕಳೆದುಕೊಳ್ಳುತ್ತಲೇ ಇರುತ್ತೇವೆ.

ಎನ್. ವಸಂತಾ, ಬೆಂಗಳೂರು

*'ನೀವು ಕೇಳಿದಿರಿ' ಅನ್ನುವ ಬದಲು 'ನೀವು ಕೇಳಿದಿರಿ ಕೆಲವರ ಪ್ರಶ್ನೆಗಳಿಗೆ ಉತ್ತರ' ಎಂದು ಬದಲಾಯಿಸಿದರೆ ಹೇಗೆ?*

ಅಂಕಣ ಹಿಗ್ಗಿಸಲು ಸಾಧ್ಯವಿಲ್ಲ ಬೆಹನ್‌ಜೀ; ಉತ್ತರ ಬಂದಾಗಲೇ ಹಿಗ್ಗಬೇಕೆಂದು ಬಿನ್ನಹ.

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ

*ಮಗನು ತಾಯಿಗೆ ಒದ್ದರಬಹುದು. ಆದರೆ ತಾಯಿ ಮಗನಿಗೆ ಒದೆಯಲಾರಳು. ಏಕಿರಬಹುದು?*

ಸೀರೆಗೆ ಕಾಲು ತೊಡರಿಕೊಂಡು ತಾನೇ ಬಿದ್ದುಬಿಡುವುದರಿಂದ.

ದೊಡ್ಡ ಎಡವಟ್ಟು, ಮೂಡಿಗೆರೆ

*ಸುಳ್ಳಿಗೂ, ಮಳ್ಳಿಗೂ, ಜೋಕಿಗೂ ಎಷ್ಟು ವ್ಯತ್ಯಾಸ?*

ಸತ್ಯವನ್ನು ಮರೆಮಾಚಿದರೆ ಸುಳ್ಳು, ತಿರುಚಿದರೆ ಮಳ್ಳಿ, ತೇಲಿಸಿದರೆ ಜೋಕ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಹೆಣ್ಣುಮಕ್ಕಳಿಗಿರುವಷ್ಟು ಸಹನೆ ಗಂಡಸರಿಗಿರುವುದಿಲ್ಲವೇಕೆ?*

ಸರಿಯೇ; ಪಳಗಿಸುವವರಿಗೆ ಪ್ರಾಣಿಗಳಿಗಿಂತ ಹೆಚ್ಚು ಸಹನೆ ಇರಲೇಬೇಕು.

ಡಾ. ಸೀಮಂತಿನಿ ದೇಸಾಯಿ, ವೈಟ್‌ಫೀಲ್ಡ್

*ನಾನ್ ಹಾಗೆ, ನಾನ್ ಹೀಗೆ.... ನೀವ್ಯಾಕ್ ಹೀಗೆ ರಾಮ್?*

'ಹಾಗೆ'ಯ 'ಹಾ' ನೋವು ಸೂಚಕ, 'ಹೀಗೆ'ಯ ಹೀ ನಗುವಿನ ಸೂಚಕವಾದ್ದರಿಂದ!

ಕಾಡನೂರು ರಾಮಶೇಷ, ಹುಲಿಮಂಗಲ

*ಶ್ರೀರಾಮನ ಯಾವ ಗುಣ ನಿಮ್ಮಲ್ಲಿದೆ ರಾಮ್‌ಜೀ?*

ಬಿಲ್ ಎತ್ತುವ ಗುಣ.

## ಬಹುಮಾನಿತ ಪ್ರಶ್ನೆ

ವೈ.ಎನ್. ಸುಂದರೇಶನ್, ಮೈಸೂರು

*ಉಪ್ಪು ಅತ್ಯಂತ ಅಗತ್ಯ ಪದಾರ್ಥವಾದರೂ ಅದರ ಬೆಲೆ ಅತ್ಯಂತ ಕಡಿಮೆ. ಏಕೆ?*

ಉಪ್ಪು ಬೆಲೆಯಲ್ಲಾಗಲಿ, ಅಡಿಗೆಯಲ್ಲಾಗಲಿ, ಹೆಚ್ಚಾಗುವುದನ್ನು ಜನ ಸಹಿಸುವುದಿಲ್ಲವಂತೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಕನ್ನಡದಲ್ಲಿ ಕೇಳುವ ಪ್ರಶ್ನೆಗಳಿಗೆ ನೀವು ಸಂಸ್ಕೃತ, ಇಂಗ್ಲಿಷ್‌ಗಳಲ್ಲಿ ಉತ್ತರಿಸುತ್ತೀರಲ್ಲಾ...?*

ಸಂಸ್ಕೃತ ಸು-ಸಂಸ್ಕೃತರು, ಇಂಗ್ಲಿಷ್ ಆಧುನಿಕ ಕನ್ನಡಿಗರು ಮೆಚ್ಚಲೆಂದು!

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಗಾಂಧರ್ವವಿವಾಹಕ್ಕೂ, ರಿಜಿಸ್ಟರ್ಡ್ ಮ್ಯಾರೇಜ್‌ಗೂ ಕಾಮನ್ ಆದುದು ಏನು?*

ಎರಡರಲ್ಲೂ ಲಾಡು ಊಟ ಖೋತಾ.

ಎನ್.ಎಸ್. ಚಂದ್ರಶೇಖರ್, ಬೆಂಗಳೂರು

*ಕರೆಂಟಿನ ವೇಗ ಹೆಚ್ಚೋ, ನೆನಪಿನ ವೇಗ ಹೆಚ್ಚೋ?*



ನೇರ ಮಾರ್ಗದಲ್ಲಿ ಕರೆಂಟಿನದು, ಅಡ್ಡಾದಿಡ್ಡಿಯಲ್ಲಿ ನೆನಪಿನದು.

ಎಚ್.ಜಿ. ಜಗದೀಶ್, ಮೈಸೂರು

*ಈ ಜಗತ್ತೇ ಒಂದು ನಾಟಕರಂಗ ಎನ್ನುತ್ತಾರೆ. ಹಾಗಾದರೆ ಪ್ರೇಕ್ಷಕರು ಯಾರು?*

ಯಾವ ಯಾವ ಅಂಕದಲ್ಲಿ ಯಾರು ಯಾರು ಇರುವುದಿಲ್ಲವೋ ಅವರೇ.

ವಿ.ಎನ್.ಎಸ್. ಸುಂದರ್, ಬೆಂಗಳೂರು

*ಬಲಭೀಮನ ಕೈಗೆ ಬಿಲ್ಲು-ಬಾಣವನ್ನು ಕೊಟ್ಟು, ಧನುರ್ಧಾರಿ ಅರ್ಜುನನಿಗೆ ಗದೆಯನ್ನು ಕೊಟ್ಟರೆ ಹೇಗಿರುತ್ತೆ ಗುರೂಜೀ?*

ಶೀರ್ಷಿಕೆ 'ವ್ಯಾಸಭಾರತ' ಎನ್ನುವ ಬದಲು 'ದೋಷಭಾರತ' ಎಂದು ಬದಲಾಗುತ್ತದೆ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಬಯಸಿದಂತೆ ಬೆಳೆ ಬಂದರೆ ಏನಾಗಬಹುದು?*

ಬೆಳೆ ಹೆಚ್ಚಿ ಬೆಲೆ ಇಳಿಯಬಹುದು!

■ ರಾಮ್